ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 15 : 347

ಉರ್ದು ಮತ್ತು ಮರಾಠಿ ಉಪಾಧ್ಯಾಯರ ನೇಮಕಾತಿ.

15(347) ಶ್ರೀ ಸಯ್ಯದ್ ಜುಲ್‌ಫೀಕರ್ ಹಸ್ಮಿ (ಬೀದರ್) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಉರ್ದು ಮತ್ತು ಮರಾಠಿ ಪ್ರೌಢಶಾಲಾ ಶಿಕ್ಷಕರನ್ನು ನೇಮಕಾತಿ ಮಾಡುತ್ತಿಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ನೇಮಕಾತಿ ಮಾಡಿದ ಜಿಲ್ಲಾವಾರು ವಿವರಗಳನ್ನು ನೀಡುವುದು;

ಇ) ಹಾಗಿಲ್ಲದಿದ್ದಲ್ಲಿ ಕಾರಣ ನೀಡುವುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :—

ಅ) ನೇಮಕಾತಿ ಮಾಡಲಾಗಿದೆ.

ಆ) ನೇಮಕಾತಿಯನ್ನು ವಿಭಾಗೀಯ ಮಟ್ಟದಲ್ಲಿ ಮಾಡುವುದರಿಂದ 1996ರಲ್ಲಿ ನೇಮಕಾತಿ ಮಾಡಲಾದ ಶಿಕ್ಷಕರ ವಿಭಾಗವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

ವಿಭಾಗ	ಉರ್ದು	ಮರಾಠಿ
ಬೆಂಗಳೂರು	10	
ಮೈಸೂರು	9	
ಗುಲ್ಬರ್ಗಾ	7	6
ಬೆಳಗಾಂ	45	15

ಅಲ್ಲದೆ, ಕೆಳಕಂಡಂತೆಯೂ ನೇಮಕಾತಿಯನ್ನು 1997-98ನೇ ಸಾಲಿಗೆ ಮಾಡಲಾಗುತ್ತಿದ್ದು ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ವಿಭಾಗ	ಉರ್ದು	ಮರಾಠಿ
ಬೆಂಗಳೂರು	15	--
ಮೈಸೂರು	7	--
ಗುಲ್ಬರ್ಗಾ	35	23
ಬೆಳಗಾಂ	18	7
	75	30

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಮಾನ್ಯ ಅಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ. ಆದರೆ ಅವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. 1994-95 ರಿಂದ ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡುತ್ತಿದ್ದಾರೆ. 1996ರಲ್ಲಿ ಉರ್ದು ಮತ್ತು ಮರಾಠಿ ಶಿಕ್ಷಕರನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ನೇಮಕವನ್ನು ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂನಲ್ಲಿ ಮಾಡಿದ್ದೇವೆ ಎಂದು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. 1996ರಿಂದ ಇವೊತ್ತಿನವರೆಗೆ ಕನ್ನಡ, ಉರ್ದು, ಮರಾಠಿ ಶಿಕ್ಷಕರ ಯಾವುದೇ ನೇಮಕಾತಿಯೂ ಆಗಿಲ್ಲ. ಈ ತಪ್ಪು ಮಾಹಿತಿಯಿಂದಾಗಿ ನನಗೆ ಬಹಳ ನೋವಾಗುತ್ತಿದೆ. ಕನ್ನಡ ಮತ್ತು ಮರಾಠಿ ಪ್ರೌಢಶಾಲೆಗಳು ಎಷ್ಟಿವೆ, ಇದರಲ್ಲಿ ವಿಜ್ಞಾನ ಹಾಗೂ ಗಣಿತ ಶಿಕ್ಷಕರುಗಳು ಎಷ್ಟು ಬೇಕು ಎಂಬುದರ ಬಗ್ಗೆ ಇನ್ನೂ ಇವರ ಬಳಿ ಸರ್ವೇ ರಿಪೋರ್ಟ್ ಇಲ್ಲ. ಇಂದು ಮೆಡಿಕಲ್ ಸೀಟ್‌ನಲ್ಲಾಗಲಿ, ಇಂಜಿನಿಯರಿಂಗ್ ಸೀಟ್‌ನಲ್ಲಾಗಲಿ ಅಥವಾ ಇನ್ಯಾವುದೇ ಸೀಟ್‌ಗೆ ಅಡ್ಮಿಷನ್ ಇಂದಿನ ಕಾಲದಲ್ಲಿ ಮೆರಿಟ್ ಮೇಲೆಯೇ ಆಗುತ್ತಿದೆ. ಆದರಲ್ಲೂ ಮುಖ್ಯವಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಮೆರಿಟ್ ನೋಡಿ ಅಡ್ಮಿಶನ್ ಮಾಡುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದಲೂ ಕೂಡ ಉರ್ದು ಮತ್ತು ಮರಾಠಿ ಪ್ರೌಢಶಾಲೆಗಳಲ್ಲಿ ಗಣಿತ ಮತ್ತು ವಿಜ್ಞಾನ ಶಿಕ್ಷಕರನ್ನು ಬೇಕೆಂತಲೇ ನೇಮಕಾತಿ ಮಾಡುತ್ತಿಲ್ಲ. ಆದರೆ ಇವರು ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಶ್ರೀಮತಿ ಲಲಿತಾನಾಯಕ್‌ನವರು ಮಾತನಾಡುವಾಗ ಯಾವುದೇ ಸಮಾಜವನ್ನು ನಾಶ ಮಾಡಬೇಕೆಂದರೆ ಮೋದಲು ಅವರ ಭಾಷೆಯನ್ನು ನಾಶ ಮಾಡಬೇಕು ಎಂದು ಏನು ಹೇಳಿದರೋ ಆ ರೀತಿ ಇವರು ಮಾಡುತ್ತಿದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗ ಒದಗಿಸಿರುವ ಉತ್ತರ ಸರಿಯಾಗಿದೆ. ಆದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನಿದೆಯೋ ಅದು ಬಂದಿಲ್ಲವೆಂದು ಅವರ ಮನಸ್ಸಿಗೆ ನೋವಾಗಿರಬಹುದು. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುವುದೇನೆಂದರೆ ನಾವು ಕನ್ನಡ ಭಾಷೆಗೆ ಕೊಟ್ಟಂಥ ಪ್ರಾತಿನಿಧ್ಯವನ್ನು ಮೈನಾರಿಟಿ ಭಾಷೆಗಳ ಪ್ರೌಢಶಾಲೆಗೂ ಕೊಡುವುದರಲ್ಲಿ ಸ್ವಲ್ಪ ತಡವಾಗಿದೆ. ಆದರೆ ಈಗ ಇದು ನಾವು ಬಂದ ಮೇಲೆ ಕಾರ್ಯರೂಪಕ್ಕೆ ಬಂದಿದೆ. ಸ್ವಲ್ಪ ಡಿಲೇ ಆಗಿತ್ತು. ಈಗಾಗಲೇ ಆ ಕಾನೂನು ಜಾರಿಗೆ ಬರುವುದಕ್ಕೆ ಅವಕಾಶವಾಗಿದೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತು ತಾವು ಒಂದು ಮೀಟಿಂಗ್ ಕರೆದು ಇವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದರೂ ಕೂಡ ಇನ್ನೂ ಆಗಿಲ್ಲ. ಈಗಾಗಲೇ ಮೂರು ತಿಂಗಳಾಗಿದೆ. ಇವರು ಕನ್ನಡಕ್ಕೆ ಕೊಟ್ಟಷ್ಟು ಪ್ರಾತಿನಿಧ್ಯವನ್ನೇನೂ ಆ ಲೆವೆಲ್‌ನಲ್ಲಿ ಕೊಡಬೇಡಿ. ಆದರೆ ಉರ್ದು ಮತ್ತು ಮರಾಠಿ ಮಾಧ್ಯಮದ ಪ್ರೌಢಶಾಲೆಗಳಿಗೆ ಗಣಿತ ಮತ್ತು ವಿಜ್ಞಾನ ಶಿಕ್ಷಕರನ್ನು ಕೊಡಿ.

ಈ ಶಿಕ್ಷಕರುಗಳೇ ಇಲ್ಲದಿದ್ದರೆ ಹುಡುಗರು ಮೆರಿಟ್‌ನಲ್ಲಿ ಹೇಗೆ ಬರಲು ಸಾಧ್ಯವಾಗುತ್ತದೆ? ಈಗಾಗಲೇ ಕೆ.ಎ.ಟಿ. ಹಾಗೂ ಡಿ.ಪಿ.ಎ.ಆರ್.ನಿಂದ ಆರ್ಡರ್ ಆಗಿ ಒಂದು ವರ್ಷವಾಗಿದೆ. ಆದರೂ ಇನ್ನೂ ಅದನ್ನು ಜಾರಿಗೆ ತಂದಿಲ್ಲ. ಇವರು ಬೇಕೆಂತಲೇ ಅಲ್ಪಸಂಖ್ಯಾತ ಸಮಾಜ ವರ್ಗದವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಈಗಾಗಲೇ ಜೆ.ಡಿ. ಆಫೀಸ್‌ನಿಂದ ಸೆಕ್ರೆಟರಿಯವರಿಗೆ ಹೋಗಿದೆ, ಇನ್‌ಸ್ಟ್ರಕ್ಷನ್ ಕೊಟ್ಟು ಪರ್ಮಿಶನ್ ಕೊಡುತ್ತಿಲ್ಲ. ಏನು ತೊಂದರೆ ಎಂಬುದನ್ನು ಹೇಳಲಿ. ಕಾನೂನಿನ ತೊಡಕು ಇದ್ದರೆ ಹೇಳಿ. ನಾನು ಸುಮ್ಮನೇ ಕುಳಿತುಕೊಳ್ಳುತ್ತೇನೆ. ಏನು ಸಮಸ್ಯೆ ಇಲ್ಲದಿದ್ದರೂ ಕೂಡ ಇವರು ಸುಮ್ಮನೆ ಡಿಲೇ ಮಾಡುತ್ತಿದ್ದಾರೆ. ಈಗಾಗಲೇ ಒಂದು ವರ್ಷವಾಗಿದೆ. ಮಂತ್ರಿಗಳು ನನಗೆ ಇವೊತ್ತಿಲ್ಲದಿದ್ದರೆ ನಾಳೆಯಾದರೂ ಸ್ಪಷ್ಟಪಡಿಸಬೇಕು. ಏನೆಂದರೆ ಒಟ್ಟು ಉರ್ದು ಮಾಧ್ಯಮದ ಪ್ರೌಢಶಾಲೆಗಳು ಎಷ್ಟಿವೆ, ಎಲ್ಲೆಲ್ಲಿ ಎಷ್ಟೆಷ್ಟು ವೇಕೆನ್ಸಿಗಳು ಇವೆ ಎಂಬುದನ್ನು ಹೇಳಬೇಕು. ಸರ್ವೆ ಮಾಡಿರುವುದು ಸರಿಯಿಲ್ಲ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ನಾನು ಉದಾಹರಣೆ ಕೊಡುವುದಾದರೆ ಹೊನ್ನಕೇರಿ, ಹುಡ್ಕಿ, ಚಿಟಗುಪ್ಪ, ರಾಜೇಶ್ವರ, ಕೋಹಿನೂರು, ಮೈಲೂರು, ಔರಾದ್, ಬೀದರ್, ಇಲ್ಲಿ ಇರುವ ಪ್ರೌಢಶಾಲೆಗಳಲ್ಲಿ ಕಳೆದ ಹತ್ತು ವರ್ಷಗಳಿಂದಲೂ ಗಣಿತ ಮತ್ತು ವಿಜ್ಞಾನ ಶಿಕ್ಷಕರಿಲ್ಲ. ಅಲ್ಲಿ ಹೇಗೆ ಮ್ಯಾನೇಜ್ ಮಾಡಬೇಕು ಎಂಬುದನ್ನು ತಾವೇ ಹೇಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಮಾನ್ಯ ಸದಸ್ಯರು ಇಷ್ಟು ಶಾಲೆಗಳಲ್ಲಿ ಶಿಕ್ಷಕರಿಲ್ಲ ಎಂದಿದ್ದಾರೆ. ಆದರೆ ಅದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಅವರೇನು ಕಳೆದ 10 ವರ್ಷಗಳಿಂದ ಶಿಕ್ಷಕರಿಲ್ಲ ಎಂದಿದ್ದಾರೆ ಅದರ ಬಗ್ಗೆ ಮಾಹಿತಿಯನ್ನು ಸ್ಪಷ್ಟವಾಗಿ ನಾನು ಕೂಡಲೇ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಸಾಮಾನ್ಯವಾಗಿ ಮಾನ್ಯ ಸದಸ್ಯರು ಹೇಳತಕ್ಕಂಥಾದ್ದನ್ನು ನಿಜವೆಂದು ತಿಳಿದುಕೊಳ್ಳುತ್ತೇನೆ. ಅದು ಹೌದೋ ಅಥವಾ ಅಲ್ಲವೋ ಎಂಬ ಬಗ್ಗೆ ಅಧಿಕೃತವಾಗಿ ರೆಕಾರ್ಡ್‌ಗಳನ್ನು ನೋಡಿ ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಅಧ್ಯಕ್ಷರೆ, ಈಗಲಾದರೂ ಅಲ್ಲಿಗೆ ಶಿಕ್ಷಕರನ್ನು ನೇಮಕ ಮಾಡುತ್ತಾರೋ ಇಲ್ಲವೋ ಎಂಬುದನ್ನು ಹೇಳಬೇಕು, ಮಾಡುವುದಿದ್ದರೆ ಎಷ್ಟು ದಿವಸಗಳಲ್ಲಿ ಮಾಡುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಇಷ್ಟು ದಿವಸದಲ್ಲಿಯೇ ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು :— ಮಂತ್ರಿಗಳು ದಾಖಲೆಗಳನ್ನು ನೋಡಿ ನಿಮಗೆ ಮಾಹಿತಿಯನ್ನು ಕೊಡುತ್ತಾರೆ ಬಿಡಿ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ನಾನು ಹೇಳಿರುವುದು ಸುಳ್ಳಾದರೆ ರಾಜೀನಾಮೆಯನ್ನು ಕೊಟ್ಟುಬಿಡುತ್ತೇನೆ.

ಅಧ್ಯಕ್ಷರು :— ಇನ್ನು ಇರುವುದು ಆರು ತಿಂಗಳಿದೆ. ನೀವೇಕೆ ಸುಮ್ಮನೆ ರಿಸೈನ್, ರಿಸೈನ್ ಎಂದು ಹೇಳುತ್ತಿರಿ? ಯಾರೂ ರಿಸೈನ್ ಮಾಡಬೇಡಿ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಇವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನಾವು ಹೇಳಿದಮೇಲೂ ಇವರು ಕೆಲಸ ಮಾಡೋಲ್ಲವೆನ್ನುತ್ತಾರೆ.

ಅಧ್ಯಕ್ಷರು :— ಮಂತ್ರಿಗಳು ಉತ್ತರ ತರಿಸಿಕೊಡುತ್ತಾರೆ ಬಿಡಿ.

ಶ್ರೀ ಎಸ್. ರಾಜೇಂದ್ರನ್ :— ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು ಸುಳ್ಳಾದರೆ ಅವರ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಾಗಿ ಹೇಳಿ ಖಚಿತವಾಗಿ ಮಾಹಿತಿ ಬಗ್ಗೆ ಹೇಳುತ್ತಿದ್ದಾರೆ. ಒಂದು ವೇಳೆ ಸರಿ ಇಲ್ಲದಿದ್ದರೆ ಅಂತಹ ಮಾತನ್ನು ಅವರು ಹೇಳುತ್ತಿರಲಿಲ್ಲ. ಹೀಗಿರುವಾಗ ಮಂತ್ರಿಗಳು ಸ್ಪಷ್ಟವಾಗಿ ಏನಾದರೂ ಹೇಳಬೇಕಲ್ಲವೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಮಾಹಿತಿ ಖಚಿತವಾಗಿಲ್ಲದೆ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈಗ ಅವರೇನು 10 ಸ್ಕೂಲ್‌ಗಳ ಬಗ್ಗೆ ಹೇಳಿ ಅಲ್ಲಿ ಹತ್ತು ವರ್ಷದಿಂದ ಶಿಕ್ಷಕರು ಇಲ್ಲ ಎಂದು ಹೇಳುತ್ತಿದ್ದಾರೋ ಅದರ ಬಗ್ಗೆ ವಿವರ ಕೊಡಲಿ. ನಾನು ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸೈಯದ್ ಜುಲ್ಫೀಕರ್‌ಹಶ್ಮಿ:— ತಾವು ಬೀದರ್‌ಗೆ ಬಂದಿದ್ದಿರಿ, ತಮ್ಮ ಸೆಕ್ರೆಟರಿಯವರು ಬಂದಿದ್ದರು, ತಮ್ಮ ಕಮಿಶನರ್‌ರವರು ಬಂದಿದ್ದರು, ಪ್ರಾಥಮಿಕ ಶಿಕ್ಷಣದ ಡೈರಕ್ಟರ್ ಬಂದಿದ್ದರು, ಎಲ್ಲರಿಗೂ ಹೇಳಿದೆ, ತಾವೂ ಕೂಡ ರಿವ್ಯೂ ಮಾಡಿದಿರಿ. ಎಲ್ಲವೂ ನಿಮಗೆ ಗೊತ್ತಿದೆ. ತಮ್ಮ ಸೆಕ್ರೆಟರಿಯವರಿಗೂ ಕೂಡ ನಾನು ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ, ನಿಮ್ಮ ಪಿ.ಎಸ್.ರವರಿಗೂ ಕೂಡ ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ, ಸರ್ವೆ ಮಾಡಿಕೊಟ್ಟಿದೆ, ಡೈರಕ್ಟರ್ ಆಫ್ ಮೈನಾರಿಟಿಸ್‌ರವರು ರಿಪೋರ್ಟ್ ಕೊಟ್ಟಿದ್ದಾರೆ, ಇಷ್ಟೆಲ್ಲಾ ಕೊಟ್ಟಿದ್ದರೂ ಕೂಡ ಇನ್ನೂ ರಿಪೋರ್ಟ್ ನಿಮ್ಮ ಹತ್ತಿರ ಇಲ್ಲವೆಂದರೆ ನಾನೇನು ಹೇಳಬೇಕು ಸಾರ್? ನಾವೇನು ಸುಮ್ಮನೇ ಹೇಳುತ್ತಿಲ್ಲ. ನಾನು ಪ್ರಾಕ್ಟಿಕಲ್ ರೀತಿಯಲ್ಲಿ ಫಾಲೋಆಫ್ ಮಾಡುತ್ತಿರುತ್ತೇವೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಅಧ್ಯಕ್ಷರೆ, ಬೀದರ್‌ನಲ್ಲಿ ನಾನು ಉಪ ನಿರ್ದೇಶಕರ ಕಛೇರಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮಾನ್ಯ ಸದಸ್ಯರು ನನ್ನ ಜೊತೆ ಇದ್ದರು. ಅಲ್ಲಿಯ ಸಮಸ್ಯೆಗಳನ್ನೆಲ್ಲಾ ನನಗೆ ಹೇಳಿದ್ದಾರೆ. ಸೆಕ್ರೆಟರಿ ಮತ್ತು ಕಮಿಶನರ್‌ರವರಿಗೂ

ಹೇಳಿದ್ದಾರೆ. ಅದರ ಬಗ್ಗೆ ದೀರ್ಘವಾಗಿ ನಾವು ಯೋಚನೆ ಮಾಡಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ನನಗೆ ಅದರ ಸೀರಿಯಸ್‌ನೆಸ್ ಬಗ್ಗೆ ಗೊತ್ತಿದೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಅಧ್ಯಕ್ಷರೆ, ಇದರ ಬಗ್ಗೆ ತಮ್ಮ ಛೇಂಬರ್‌ನಲ್ಲಿ ನಾಳೆ ಅರ್ಧ ಗಂಟೆ ಮೀಟಿಂಗ್ ಮಾಡಿ.

ಅಧ್ಯಕ್ಷರು :— ನಾಳೆ ಬೇಡ. ಶನಿವಾರ ಮಾಡೋಣ.

ಮುಳಬಾಗಿಲು ತಾಲ್ಲೂಕಿಗೆ ವಿಶ್ವಬ್ಯಾಂಕ್ ಯೋಜನೆಯಡಿ ಆಸ್ಪತ್ರೆ ಪ್ರಾರಂಭಿಸುವುದು.

156(1110) ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲ್ಲೂಕಿಗೆ ವಿಶ್ವಬ್ಯಾಂಕ್ ಯೋಜನೆಯಡಿ 50 ಹಾಸಿಗೆಯುಳ್ಳ ಆಸ್ಪತ್ರೆ ಮಂಜೂರಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಅದನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಮುಳಬಾಗಿಲು ತಾಲ್ಲೂಕು ಆಸ್ಪತ್ರೆಯನ್ನು ಸದ್ಯದ 30 ಹಾಸಿಗೆಗಳಿಂದ 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಲ್ಲಿ ಸೇರಿದೆ.

ಆ) ಕಾಮಗಾರಿಯ ಪ್ರಾರಂಭಿಕ ನಕ್ಷೆಗಳು ವಿಶ್ವಬ್ಯಾಂಕಿನಿಂದ ಅನುಮೋದಿತವಾಗಿದೆ ಅಂತಿಮ ನಕ್ಷೆ ಮತ್ತು ಅಂದಾಜು ಈಗ ತಯಾರಾಗಿದ್ದು, ರೂ. 95 ಲಕ್ಷಕ್ಕೆ ತಯಾರಿಸಲಾಗಿದ್ದು, ಪರಿಶೀಲನೆಯಲ್ಲಿದೆ ಈ ಅಂತಿಮ ಅಂದಾಜು ಮತ್ತು ವಿವರವಾದ ನಕ್ಷೆಗಳನ್ನು ಅನುಮೋದನೆಗಾಗಿ ಮುಂದಿನ ಚಾಲನ ಸಮಿತಿ ಮುಂದೆ ಇಡಲಾಗುವುದು ಹಾಗೂ ಏಪ್ರಿಲ್ ತಿಂಗಳಲ್ಲಿ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು.

ಶ್ರೀ ಆರ್. ಶ್ರೀನಿವಾಸ್:— ಮಾನ್ಯ ಅಧ್ಯಕ್ಷರೆ, ನಾನು ಇದೇ ಪ್ರಶ್ನೆಯನ್ನು ಕಳೆದ ಅಧಿವೇಶನದಲ್ಲಿ ಕೇಳಿದಾಗ ಬರುವ ಮಾರ್ಚ್ ತಿಂಗಳು ಆದಮೇಲೆ ಪ್ರಾರಂಭ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಮಂತ್ರಿಗಳು ಕೊಟ್ಟಿದ್ದರು. ಆದರೆ ಅದು ಇನ್ನೂ ಕೂಡ ಪ್ರಾರಂಭವಾಗದೆ ಕೇವಲ ಆಶ್ವಾಸನೆಯ ಹಂತದಲ್ಲಿಯೇ ಇದೆ. ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬ ಬಗ್ಗೆ ದಯವಿಟ್ಟು ಖಚಿತವಾದ ಉತ್ತರವನ್ನು ಕೊಡಬೇಕು.